# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 94 |
| ಸದಸ್ಯರ ಹೆಸರು | : | ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸ | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳ ವ್ಯಾಪ್ತಿಯಡಿ ಬರುವ ಎಂ.ಪಿ.ಎಂ ಜಮೀನು ಅರಣ್ಯ ಕ್ಷೇತ್ರವೆಂದು ಘೋಷಿಸಿದ್ದು, ಸದರಿ ಜಮೀನಿನಲ್ಲಿ ಬೆಳೆದಿರುವ Eucalyptus ಮರಗಳನ್ನು ನಾಶ ಮಾಡಬೇಕೆಂದು ನಿಯಮಗಳನ್ನು ರೂಪಿಸಿರುವುದು ನಿಜವೇ; | ಸರ್ಕಾರಿ ಆದೇಶ ಸಂಖ್ಯೆ ಎಫ್.ಎಫ್.ಡಿ. 27, ಎಫ್.ಡಿ.ಪಿ/79 ದಿನಾಂಕ 11.08.1980ರಲ್ಲಿ ಮೈಸೂರು ಕಾಗದ ಕಾರ್ಖಾನೆಗೆ 30,000 ಹೆಕ್ಟೇರ್ ಅರಣ್ಯ / ಸಿ ಮತ್ತು ಡಿ ವರ್ಗದ ಭೂಮಿಗಳನ್ನು ನೀಡಿ ಸರ್ಕಾರವು ಆದೇಶಿಸಿರುತ್ತದೆ.<br><br>ಸದರಿ ಗುತ್ತಿಗೆ ನೀಡಿದ 30000 ಹೆಕ್ಟೇರ್ ಪ್ರದೇಶದಲ್ಲಿ ಕಾಗದ ಕಾರ್ಖಾನೆಯು ಕಚ್ಚಾವಸ್ತುವಿಗಾಗಿ ಅಕೇಶಿಯಾ, ನೀಲಗಿರಿ, ಪೈನಸ್, ಜಾಲಿಮರದ ನೆಡುತೋಪುಗಳನ್ನು ನಿರ್ಮಾಣ ಮಾಡಿರುತ್ತದೆ.<br><br>2015 ರಲ್ಲಿ ಮೈಸೂರು ಕಾಗದ ಕಾರ್ಖಾನೆಯ ಉತ್ಪಾದನೆಯು ಸ್ಥಗಿತವಾಗಿರುತ್ತದೆ. 2016-17 ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ನೀಲಗಿರಿ ಬೆಳೆಯುವುದನ್ನು ನಿಷೇಧಿಸಿ ಆದೇಶ ಹೊರಡಿಸಿರುತ್ತದೆ.<br><br>ನೀಲಗಿರಿ ಬೆಳೆ ನಿಷೇಧ ಆದೇಶಕ್ಕೆ ಕೆಲವು ಖಾಸಗಿ ಕಂಪನಿಗಳು ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿರುತ್ತವೆ. ದಿನಾಂಕ: 20.11.2020ರ ಸರ್ಕಾರಿ ಆದೇಶ ಸಂಖ್ಯೆ ಎಫ್ ಇ ಇ 121 ಎಫ್‌ಎಲ್‌ಎಲ್ 2015 ರಲ್ಲಿ ಮೈಸೂರು ಕಾಗದ ಕಾರ್ಖಾನೆಗೆ 20005.42 ಹೆಕ್ಟೇರ್ ಅರಣ್ಯ ಭೂಮಿಯ ಗುತ್ತಿಗೆಯನ್ನು ದಿನಾಂಕ 11.08.2020 ರಿಂದ 10.08.2060 ರವರೆಗೆ ನವೀಕರಿಸಿ ಆದೇಶಿಸಿರುತ್ತದೆ.<br><br>ಸದರಿ ನವೀಕರಿಸಿದ 20005.42 ಹೆಕ್ಟೇರ್ ಪ್ರದೇಶವು ನಾಲ್ಕು ಜಿಲ್ಲೆಗಳ ವ್ಯಾಪ್ತಿಯಲ್ಲಿರುತ್ತದೆ. ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, ಪ್ರಸ್ತುತ ಮೈಸೂರು ಪೇಪರ್ ಮಿಲ್ಸ್ ಕಾಗದ ಕಾರ್ಖಾನೆಯು 10650.6 ಹೆಕ್ಟೇರ್ |

| | | |
|---|---|---|
| | | ಪ್ರದೇಶದಲ್ಲಿ ನೀಲಗಿರಿ ಬೆಳೆಯನ್ನು ಹೊಂದಿರುತ್ತದೆ.<br><br>ಸದರಿ ನೀಲಗಿರಿ ನೆಡುತೋಪುಗಳು ಹಳೆಯ ನೆಡುತೋಪುಗಳಾಗಿರುತ್ತವೆ. 2017 ರಿಂದ ಯಾವುದೇ ಹೊಸ ನೀಲಗಿರಿ ನೆಡುತೋಪುಗಳನ್ನು ನಿರ್ಮಾಣ ಮಾಡಿರುವುದಿಲ್ಲ.<br><br>ನೀಲಗಿರಿ ಬೆಳೆ ಕಟಾವು ಆದ ನಂತರ ಚಿಗುರುಗಳನ್ನು ಹಾಗೆಯೇ ಬಿಡಲಾಗಿರುತ್ತದೆ. ನೀಲಗಿರಿ ಬೆಳೆ ನಾಶ ಮಾಡುವ ಆದೇಶ ಇರುವುದಿಲ್ಲ. ಬೆಳೆಯುವುದಕ್ಕೆ ನಿಷೇಧ ಇರುತ್ತದೆ |
| ಆ) | ಹಾಗಿದ್ದಲ್ಲಿ, 2009ನೇ ಸಾಲಿನಿಂದಲೂ ಸದರಿ ಮರಗಳನ್ನು ಕಡಿಯದೆ ಗಂಧದ ಮರಗಳು ಸೇರಿದಂತೆ ಇತರ ಮೌಲ್ಯಧಾರಿತ ಮರಗಳನ್ನು ಕಡಿದು ಕಳ್ಳ ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಕಳೆದ ಸಾಲಿನವರೆಗೆ ನೀಲಗಿರಿ ಕಟಾವಣೆ ಮತ್ತು ನೆಡುತೋಪು ನಿರ್ವಹಣೆ ನಡೆಯುತ್ತಾ ಬಂದಿರುತ್ತದೆ. ಶ್ರೀಗಂಧದ ಮರಗಳು ಸೇರಿದಂತೆ ಇತರ ಮೌಲ್ಯಾಧಾರಿತ ಮರಗಳ ಕಡಿತಲೆ ಹಾಗೂ ಕಳ್ಳ ಸಾಗಾಣಿಕೆ ಪ್ರಕರಣಗಳು ಯಾವುದೂ ಇರುವುದಿಲ್ಲ. |

ಸಿಐ 29 ಸಿಪಿಎಂ 2024 (ಇ)

(ಎಂ.ಬಿ ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.